ಕನಸು ಕಾಣುತ್ತ ದಿನಗಳನ್ನು ಕಳೆದದ್ದು. ದುಡ್ಡಿನ ಅಗತ್ಯ ಬಿದ್ದಾಗ ರೈಲಿನ ಹಳಿ ಹಾಕುವ ಗ್ಯಾಂಗಿನಲ್ಲಿ ಕೂಲಿಯಾಗಿ ಕೆಲಸ ಮಾಡಿದ್ದು. ದುಡ್ಡು ಒಟ್ಟು ಮಾಡಿಕೊಂಡು, ರೈಲ್ವೆ ನೌಕರ ಅಂತ ಸುಳ್ಳು ಹೇಳಿಕೊಂಡು ಪುಕ್ಕಟೆಯಾಗಿ ರೈಲಿನಲ್ಲಿ ಓಡಾಡುತ್ತ, ಹತ್ತಾರು ತಿಂಗಳು ಕಡಪಾದಿಂದ ಒರಿಸ್ಸಾವರೆಗೆ ಓಡಾಡಿದ್ದು. ಒಂದೇ ಎರಡೇ? ಹುಚ್ಚು ಸಾಹಸಗಳು. ಇನ್ನೇನು ಎಲ್ಲವೂ ಬದಲಾಗಿ ಬಿಡುತ್ತೆ ಅನ್ನೋ ಆಸೆ. ಹಾಗೆ ಕನಸು ಕಾಣುತ್ತ ಬದುಕೋದರಲ್ಲಿ ಒಂಥರಾ ಸುಖ ಇತ್ತು.

ಕೊನೆ ಕೊನೆಗೆ ಅದೂ ಭ್ರಮೆ ಅನ್ನಿಸಿತ್ತು. ಸೋಗು ಹಾಕಿಕೊಂಡು ಬದುಕುತ್ತಿದ್ದೇನೆ ಅನ್ನುವುದು ಖಾತ್ರಿಯಾಗಿ, ಸಮಾನತೆಯ ಸಮಾಜ ನಿರ್ಮಾಣ ಆಗದ, ಹೋಗದ ಕೆಲಸ ಅನ್ನೋ ವಾಸ್ತವ ಅರ್ಥವಾಗುವ ಹೊತ್ತಿಗೆ ತಡವಾಗಿತ್ತು. ಆ ಮೇಲೆ ಯಾರಿಗೂ ಹೇಳದೆ, ಯಾರನ್ನೂ ಕೇಳದೆ ಊರಿಗೆ ಬಂದು ಒಂದು ವರ್ಷ ತಲೆ ಮರೆಸಿಕೊಂಡವನಂತೆ ಇದ್ದು, ನೆಂಟರೊಬ್ಬರ ಮನೆಯಲ್ಲಿ ಆಶ್ರಯಪಡೆದು, ಅವರ ಸಣ್ಣ ಊರಿನ ಕಾಲೇಜಲ್ಲಿ ಓದಿ ಡಿಗ್ರಿ ಮುಗಿಸಿ, ಮೈಸೂರಿಗೆ ಬಂದು ಮನೆ ಮನೆಗೆ ಪೇಪರ್ ಹಾಕಿ, ಸಂಜೆ ವಕೀಲರೊಬ್ಬರ ಆಫೀಸಿನಲ್ಲಿ ಅವರು ಹೇಳಿದ ಎಲ್ಲಾ ಕೆಲಸ ಮಾಡುತ್ತಲೇ ಎಂ.ಎ. ಮುಗಿಸಿದ್ದು, ಮೀಸಲಾತಿ, ಅರ್ಹತೆ ಎರಡೂ ಇದ್ದರೂ ಕೆಲಸ ಸಿಗದೆ ಕೊನೆಗೆ ಮಠವೊಂದರ ಶಾಲೆಯಲ್ಲಿ ಮಕ್ಕಳಿಗೆ ಆರು ತಿಂಗಳು ಪಾಠ ಹೇಳಿದ್ದು. ಸ್ವಾಮೀಜಿ ಶಿಷ್ಯರಾಗಿದ್ದ ವೈಸ್ ಛಾನ್ಸಲರ್ ಮಕ್ಕಳಿಗೆ ಪಾಠ ಹೇಳಿಕೊಟ್ಟು, ಅವರ ವಿಶ್ವಾಸ ಗಿಟ್ಟಿಸಿ ಕೊನೆ ಯೂನಿವರ್ಸಿಟಿಯಲ್ಲಿ ಕೆಲಸ ಹುಡುಕಿಕೊಳ್ಳುವ ಹೊತ್ತಿಗೆ ಮದುವೆಯ ವಯಸ್ಸು ಮೀರಿತ್ತು. ಮದುವೆ ವಯಸ್ಸು ದಾಟಿದವನಿಗೆ ಸಿಕ್ಕ ಹೆಂಡತಿ ರೋಗಿಷ್ಠೆ ಅನ್ನೋದು ಮಾತ್ರ ಬೇಗ ಗೊತ್ತಾಯಿತು. ಮೂರೇ ವರ್ಷಗಳಲ್ಲಿ ಟಿಬಿ ಅವಳನ್ನು ತಿಂದು ಮುಗಿಸಿತು. ಆ ಮೇಲೆ ಅವರಿಗೆ ಬದುಕು ಸಾಕು ಅನ್ನಿಸಿತ್ತು.

ಸುಂದರ ಬಾಲ್ಯ, ಕುತೂಹಲ ಹುಟ್ಟಿಸುವ ಯೌವನ ಎಲ್ಲವನ್ನೂ ಬಿಟ್ಟುಕೊಟ್ಟು ಅಬ್ಬೇಪಾರಿಯಂತಾಗಿ ಬಿಟ್ಟೆ ಅನ್ನಿಸಿದಾಗಲೆಲ್ಲ ಅವರಲ್ಲಿ ಖಿನ್ನತೆಯ ಭಾವ ಹುಟ್ಟಿ ಹತ್ತಾರು ದಿನಗಳು ಅವರನ್ನು ಕಾಡುತ್ತಲೇ ಇತ್ತು.

ಗೌರವದಿಂದ ಬದುಕಬೇಕು ಅನ್ನೋ ಛಲಕ್ಕೆ ಬಿದ್ದು, ಹಗಲು ರಾತ್ರಿ ಅದೂ ಇದೂ, ಬೇಕಾದದ್ದು, ಬೇಡವಾದದ್ದು ಎಲ್ಲವನ್ನೂ ಓದಿಕೊಂಡು ಹಳೆಯದನ್ನೆಲ್ಲ ಮರೆತು, ಅನುಭವಗಳಿಂದ ಪಾಠ ಕಲಿಯುತ್ತ ಈ ಹಂತ ತಲುಪಿದ್ದರು. ಕೆಲವು ಸಲ ಇಷ್ಟಕ್ಕಾಗಿ ಎಷ್ಟೊಂದು ಶ್ರಮಪಡಬೇಕಾಯಿತು ಅಂತ ಅನ್ನಿಸಿದ ಮರುಕ್ಷಣವೇ ಜಿಗುಪ್ಸೆ ಹುಟ್ಟಿ ಬಿಡುತ್ತಿತ್ತು. ಅದನ್ನು ಪ್ರಯತ್ನ ಪೂರ್ವಕವಾಗಿ ಮರೆಯುತ್ತಿದ್ದರು. ಅದನ್ನೆಲ್ಲ ಮರೆಯಲೆಂದೇ ಸಹಾಯ ಕೇಳಿಕೊಂಡು ಬಂದವರಿಗೆಲ್ಲ ನೆರವಾಗುತ್ತಿದ್ದರು. ಅದೇ ಅವರ ವ್ಯಕ್ತಿತ್ವದ ಪ್ರಮುಖ ಭಾಗವಾಗಿಹೋಯಿತು.

ಎಲ್ಲಕ್ಕಿಂತಲೂ ರೋಚಕ ಅಂತ ಅವರಿಗೆ ಅನ್ನಿಸೋದು, ಮೂರ್ನಾಲ್ಕು ವರ್ಷ ಗೊತ್ತು ಗುರಿ ಇಲ್ಲದೆ ಅಲೆದಾಡಿದ ದಿನಗಳಲ್ಲಿ ಒಮ್ಮೆಯೂ ಪೊಲೀಸರ ಕಣ್ಣಿಗೆ ಬೀಳದೆ, ದೂರು ದಾಖಲಾಗುವಂತಹ ಕೃತ್ಯಗಳಲ್ಲಿ ನೇರವಾಗಿ ಭಾಗಿಯಾಗದೆ ಬಚಾವಾಗಿದ್ದು. ಅದನ್ನೆಲ್ಲ ಆಗಾಗ ನೆನಪು ಮಾಡಿಕೊಂಡು ಮನಸ್ಸಿನಲ್ಲೆ ಹಿಗ್ಗುತ್ತಿದ್ದರು.

ಈಗ ಅವರಿಗೊಂದು ಸ್ಟೇಟಸ್ ಇದೆ. ವಿದ್ಯಾರ್ಥಿಗಳಿಗೆ ಅವರೊಂದು ರೋಲ್ ಮಾಡೆಲ್. ಬಡವರು, ಕೆಳ ಜಾತಿ, ವರ್ಗಗಳ ಜನರನ್ನು ಕಂಡರೆ ಅವರಿಗೆ ಎಲ್ಲಿಲ್ಲದ ಸಹಾನುಭೂತಿ. ಅಕಡೆಮಿಕ್ ವಲಯದಲ್ಲಿ ಅವರಿಗೊಂದು ಇಮೇಜ್ ಇದೆ. ಕಷ್ಟದಲ್ಲಿ ಇರೋ ವಿದ್ಯಾರ್ಥಿಗಳು ಮಾತ್ರವಲ್ಲ ನೆರವು ಕೇಳಿಕೊಂಡು ಬಂದವರಿಗೆಲ್ಲ ಹಣಕಾಸಿನ ನೆರವೋ, ಸಲಹೆಯನ್ನೋ ನೀಡುತ್ತಿದ್ದರು. ಈ ಕಾರಣದಿಂದ ಅವರ ಹಿಂದೆ ಸದಾ ಗುಂಪು ಇರುತ್ತಿತ್ತು.

ಈ ಉಪಕಾರಿ ಮನಃಸ್ಥಿತಿಯಿಂದಲೇ ಮಾಧವಿಗೆ ನೆರವಾಗಲು ಮುಂದಾಗಿದ್ದರು. ಹೇಗಾದರೂ